ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರಃ1523/2020

ಚಾಸಾಃ2 ಪ್ರಾಸಾಃ1

ದಿನಾಂಕಃ 21.05.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ರವಿ ಎಸ್ ಜಿ |
| ತಂದೆಯ ಹೆಸರು | : | ಬೂದ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಗಾರೆ ಕೆಲಸ |
| ವಾಸ ಸ್ಥಳ | : | ನಾಯಕವಾಡಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ಸುಮಾರು 10-15 ವರ್ಷಗಳಿಂದ ಗಾರೆ ಕೆಲಸದ ಗುತ್ತಿಗೆ ವಹಿಸಿಕೊಂಡಿದ್ದು ನನ್ನೊಂದಿಗೆ 15 ರಿಂದ 20 ಜನರು ಕೆಲಸ ಮಾಡುತ್ತಿದ್ದರು.

ದಿಃ 31-08-2019 ರಂದು ಮಧ್ಯಾಹ್ನ 1-45ರ ಸಮಯದಲ್ಲಿ ನನ್ನ ಸಹಾಯಕನಾದ ನರಸಿಂಹರವರನ್ನು ಕರೆದುಕೊಂಡು ತ್ರಾಸಿಯಿಂದ ಗಂಗೊಳ್ಳಿಗೆ ದ್ವಿ ಚಕ್ರ ವಾಹನ ಸಂಖ್ಯೆ ಕೆಎ-20-6662ರಲ್ಲಿ ನಾವು ಬರುತ್ತಿದ್ದಾಗ ಗುಜ್ಜಾಡಿ ಗ್ರಾಮದ ಮಾವಿನಕಟ್ಟೆಯ ರಾಮಮಂದಿರದ ಬಳಿ 2-15ರ ಸಮಯದಲ್ಲಿ ಎದುರಿನಿಂದ Swift Car ಕೆಎ-20-ಪಿ-8643 ಸಿಲ್ವರ್ ಬಣ್ಣದ ಕಾರು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಎದುರಿನಿಂದ ಚಲಾಯಿಸಿಕೊಂಡು ಬಂದು ನಮ್ಮ ಗಾಡಿಯ ಮುಂದೆ ಇದ್ದ ದ್ವಿ ಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿ ಅನಂತರದಲ್ಲಿ ಹಿಂದೆ ಇದ್ದ ನಮ್ಮ ಗಾಡಿಗೆ ಡಿಕ್ಕಿ ಪಡಿಸಿ ಕಾರು ಪಲ್ಟಿಯಾಗಿ ರಸ್ತೆ ಪಕ್ಕಕ್ಕೆ ಬಿದ್ದಿರುತ್ತದೆ. ಇದರಿಂದ ನಾನು ಸುಮಾರು 10 ರಿಂದ 15 ಅಡಿ ಎತ್ತರಕ್ಕೆ ಹಾರಿ ಪಕ್ಕದ ಮೋರಿಗೆ ಬಿದ್ದಿದ್ದು, ಮುಖದಲ್ಲಿ, ಕಣ್ಣು, ಕಿವಿ, ತುಟಿ, 2 ಹಲ್ಲು, ತಲೆಯ ಹಿಂಭಾಗ, 2 ಕಾಲಿನ ತೊಡೆಯ ಮೂಳೆಗಳು ಮುರಿದಿದ್ದು, ಬಲಕಾಲಿನ ಮೂಳೆ ಮುರಿದಿದ್ದು, ತೀವ್ರ ಸ್ವರೂಪದ ಗಾಯಗಳಿಗೆ ಒಳಗಾಗಿರುತ್ತೇನೆ.

ನನ್ನ ವಾಹನದಲ್ಲಿ ಹಿಂಬದಿ ಸವಾರರಾಗಿದ್ದ ನರಸಿಂಹರವರು ಅಪಘಾತದಿಂದ ತಲೆಗೆ ತೀವ್ರವಾಗಿ ಗಾಯಗೊಂಡು ನಾವಿಬ್ಬರೂ ಮೊದಲಿಗೆ ಕುಂದಾಪುರ ಆದರ್ಶ ಆಸ್ಪತ್ರೆಗೆ ದಾಖಲಾಗಿ ಅನಂತರ

ಮಣಿಪಾಲಕ್ಕೆ ದಾಖಲಾಗಿ ಅಲ್ಲಿ ಆಗುವುದಿಲ್ಲ ಎಂದು ಹೇಳಿ ಉಡುಪಿಯ ಆದರ್ಶ ಆಸ್ಪತ್ರೆಗೆ ದಾಖಲಾಗಿ 2ವರೆ ತಿಂಗಳು ಚಿಕಿತೆಸ ಪಡೆದಿರುತ್ತೇನೆ. ಆ ಪೈಕಿ 16 ದಿನ ನನಗೆ ಪ್ರಜ್ಞೆ ಇರಲಿಲ್ಲ. ಅನಂತರ ನಮ್ಮ ಮುಂದೆ ಹೋಗುತ್ತಿದ್ದ ಬೈಕಿನ ಚಾಲಕನಾದ ತಾರೀಕ್ ಸ್ಥಳದಲ್ಲಿ ಮೃತಪಟ್ಟಿದ್ದು, ನಮ್ಮ ದ್ವಿ ಚಕ್ರ ವಾಹನ ಅಪಘಾತದಿಂದ 2 ಭಾಗಗಳಾಗಿ ಬಿದ್ದಿರುತ್ತದೆ. ಅನಂತರದಲ್ಲಿ ನನ್ನೊಂದಿಗೆ ವಾಹನದ ಹಿಂಬದಿ ಸವಾರನಾಗಿದ್ದ ನರಸಿಂಹರವರು ಚಿಕಿತ್ಸೆ ವೇಳೆ ಮೃತಪಟ್ಟ ವಿಚಾರ ತಿಳಿದು ಬಂದಿರುತ್ತದೆ.

ಅಪಘಾತದಿಂದ ನನ್ನ ಮುಖದ ಎಡಭಾಗದಲ್ಲಿ, 2 ಕಾಲುಗಳ ತೊಡೆಯ ಭಾಗದಲ್ಲಿ, ಬಲ ಕಾಲಿನ ಕೆಳಭಾಗದಲ್ಲಿ ರಾಡ್ ಮತ್ತು ಪ್ಲೇಟುಗಳನ್ನು ಅಳವಡಿಸಿರುತ್ತಾರೆ. ಬಲಗಣ್ಣಿನ ದೃಷ್ಟಿ ಹೋಗಿರುತ್ತದೆ. ಬಾಯಿಯ ಒಳಭಾಗದಲ್ಲಿ ಹೊಲಿಗೆಗಳು ಹಾಕಲಾಗಿದೆ. ಈ ಕುರಿತಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಅಪಘಾತ ಸಂಭವಿಸಿದ ನಂತರ ನನಗೆ ಸಾಕಷ್ಟು ನ್ಯೂನತೆಗಳು ಇದ್ದು ದೈನಂದಿನ ಜೀವನಕ್ಕಾಗಿ ಕಷ್ಟ ಪಡುತ್ತಿದ್ದು, ದುಡಿಮೆಯಲ್ಲಿ ಕ್ಷಿಣತೆ ಅನುಭವಿಸಿರುತ್ತೇನೆ.

ಸಾಕ್ಷಿಯು Silver ಬಣ್ಣದ ಕಾರು, ಬೈಕು ಹಾಗೂ ಬಿಳಿ ಬಣ್ಣದ ದ್ವಿ ಚಕ್ರ ವಾಹನಗಳನ್ನು ನೋಡಿ ಗುರುತಿಸಿದ್ದು, ತನಿಖಾಧಿಕಾರಿಯು ಹಾಜರುಪಡಿಸಿರುವ ಅದರ ಫೋಟೋಗಳಲ್ಲಿ 3 ವಾಹನಗಳ ನೋಂದಣಿ ಸಂಖ್ಯೆ ಕಂಡು ಬಾರದ ರೀತಿಯಲ್ಲಿ ಸದ್ರಿ ವಾಹನಗಳ ಫೋಟೋಗಳನ್ನು ತೆಗೆದಿಲ್ಲದೆ ನಿಲರ್ಕ್ಷ್ಯತನ ವಹಿಸಿದ್ದು ಅಲ್ಲದೇ ಭಾರತೀಯ ಸಾಕ್ಷಿ ಅಧಿನಿಯಮದ ಕಲಂ 65(ಬಿ) ರ ಪ್ರಕಾರ ಅವಶ್ಯಕವಾಗಿರುವ ಸಿ.ಡಿಯನ್ನು ಹಾಜರುಪಡಿಸಿದ್ದು ಅದು ಸಹ ಖಾಲಿ ಸಿ.ಡಿ ಆಗಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಅವರ ವಿರುದ್ದ ಸೂಕ್ತ ಕ್ರಮ ವಹಿಸುವ ಉದ್ದೇಶದಿಂದ ಸದ್ರಿ ಫೋಟೋಗಳ ಗುರುತಿಸುವಿಕೆಯನ್ನು ತನಿಖಾಧಿಕಾರಿಯ ಮೇಲೆ ಕ್ರಮ ವಹಿಸಿದ ನಂತರ ತೆಗೆದುಕೊಳ್ಳಲು ನಿರ್ಧರಿಸಿ ಮುಂದೂಡಲಾಗಿರುತ್ತದೆ.

**(ಈ ಹಂತದಲ್ಲಿ ಮೇಲಿನ ಕಾರಣದಿಂದ ಸಾಕ್ಷಿಯ ಮುಂದುವರೆದ ವಿಚಾರಣೆಯನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**